ಅಧ್ಯಕ್ಷರು : ಉತ್ತರ ಕೊಡಲು ತಯಾರಿರುವುದು 6-7 ಇದ್ದಾವೆ, ಮಂತ್ರಿಗಳು ಉತ್ತರ ಕೊಡಲು ಯಾವುದು ರೆಡಿಯಾಗಿದೆಯೋ ಅದನ್ನು ಮಾತ್ರ ಈಗ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ನನ್ನದನ್ನು ನಾಳೆಗಾದರೂ ತೆಗೆದುಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು : ನಾಳೆ ತೆಗೆದುಕೊಳ್ಳೋಣ.

ಶ್ರೀ ಪಿ.ಹೆಚ್. ಪೂಜಾರ್ : ಸನ್ಮಾನ್ಯ ಅಧ್ಯಕ್ಷರೆ, ಪ್ರವರ್ತಕ ನಿಧಿಯ ಸದುಪಯೋಗ ಜೋಳದ ಬೆಳೆಗೂ ವಿಸ್ತರಿಸಬೇಕು, ಅದರ ಬಗ್ಗೆ ನಾನು ಮಾತನಾಡುವವನಿದ್ದೆ, ಜೋಳದ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜೋಳದ ಬೆಲೆ ಕುಸಿದ ಬಗ್ಗೆ ತಾವು ಬೇಕಾದರೆ ಮಾತನಾಡಿ, ಅಡಿಕೆಯವರು, ಭತ್ತದವರು ಮಾತನಾಡುತ್ತಾರೆ, ಜೋಳದವರನ್ನು ಮಾತನಾಡಿಸಿ ಸ್ವಲ್ಪ ಮನವೊಲಿಸಿ.

ಶ್ರೀ ಪಿ.ಹೆಚ್. ಪೂಜಾರ್ : ನಮಗೆ ಇನ್ನೂ ಅವಕಾಶ ಸಿಕ್ಕಿಲ್ಲ ಅದಕ್ಕಾಗಿ ಕಾಯುತ್ತಿದ್ದೇವೆ.

ಅಧ್ಯಕ್ಷರು : ಈಗ ಮಾನ್ಯ ಚೌಡರೆಡ್ಡಿಯವರು ಮಾತನಾಡಲಿ.

ಚಿಂತಾಮಣಿ ತಾಲ್ಲೂಕು ರಾಗುತ್ತನಹಳ್ಳಿ ಗ್ರಾಮದಲ್ಲಿ ವಿದ್ಯುತ್ ತಂತಿ ತಗುಲಿ ಶ್ರೀಮತಿ ಯಲ್ಲಮ್ಮ ಎಂಬ ಮಹಿಳೆ ಸತ್ತಿರುವುದಕ್ಕೆ ಪರಿಹಾರ

+ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿನ ರಾಗುತ್ತನಹಳ್ಳಿ ಎಂಬ ಗ್ರಾಮದಲ್ಲಿ ಒಂದೇ ಕಂಬದ ಮೇಲ್ಗಡೆ 11,000 ಕೆವಿ ಹೈಟೆನ್‌ಷನ್ ವೈರ್ ಕೆಳಗಡೆ 240 ಕೆ.ವಿ. ವೈರ್ ಹಾಕಿದ್ದಾರೆ. ಹೈಟೆನ್‌ಷನ್ ವೈರ್ ಕಿತ್ತು ಹೋಗಿ ಕೆಳಗಡೆಯ 240 ಕೆ.ವಿ. ವೈರ್ ಮೇಲೆ ಬಿದ್ದು ಬಹಳ ಅಪಘಾತವಾಗಿದೆ. ಅದರ ಜೊತೆಗೆ ಈ ಘಟನೆಯಲ್ಲಿ ಶ್ರೀಮತಿ ಯಲ್ಲಮ್ಮ ಎಂಬ ಒಬ್ಬ ಮಹಿಳೆಯು ಕೂಡ ಸತ್ತು ಹೋಗಿದ್ದಾಳೆ, ಅಲ್ಲದೆ ಇನ್ನೂರು ಮುನ್ನೂರು ಮನೆಗಳಲೆಲ್ಲಾ ಮೀಟರ್ ಬೋರ್ಡ್ ಎಲ್ಲ ಸುಟ್ಟು ಹೋಗಿದೆ. ಆದುದರಿಂದ ಇವತ್ತು ಸದನದಲ್ಲಿ ಕೆಪಿಟಿಸಿಎಲ್ ಮಂತ್ರಿಗಳು ಇರುವುದರಿಂದ ಅವರಿಗೆ ಏನು ಪರಿಹಾರ ಕೊಡುತ್ತಾರೆ, ಮುಂದೆ ಈ ರೀತಿ ಅಪಘಾತಗಳಾಗದಂತೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆಂಬುದನ್ನು ಹೇಳಬೇಕು. ಪತ್ರಿಕೆಯಲ್ಲಿ 20 ಹಳ್ಳಿಗಳಿಗೆ ಒಬ್ಬ ಲೈನ್‌ಮನ್ ಇದ್ದಾನೆ, ಲೈನ್‌ಮನ್‌ಗಳ ಕೊರತೆ ಇದೆಯೆಂದು ವರದಿ ಬಂದಿದೆ. ಇವತ್ತು ಎಲ್ಲಾ ಕಡೆಯಲ್ಲೂ ಕೂಡ ವಿದ್ಯುತ್ ಸಂಪರ್ಕ ಜಾಸ್ತಿಯಾಗುತ್ತಿದೆ, ಪಂಪುಸೆಟ್‌ಗಳಿಗೆ ವಿದ್ಯುತ್ ಬೇಕಾಗಿದೆ, ಪ್ರತಿಯೊಂದು ಮನೆಗಳಿಗೂ ನಾವು ವಿದ್ಯುತ್ ಸಂಪರ್ಕವನ್ನು ಕೊಡುತ್ತಿದ್ದೇವೆ. ಲೈನ್‌ಗಳು ಯಾವುದೇ ರೀತಿಯಲ್ಲಿ ಡ್ಯಾಮೇಜ್ ಆಗದಂತೆ ನೋಡಿಕೊಳ್ಳುವುದಕ್ಕೆ ಲೈನ್‌ಮನ್‌ಗಳನ್ನು ಇಲ್ಲವೆಂದು ಹೇಳುತ್ತಾರೆ. ಪತ್ರಿಕೆಯಲ್ಲಿ ಸತ್ತ ಮಹಿಳೆಗೆ ಪರಿಹಾರ ರೂಪವಾಗಿ 50 ಸಾವಿರ ರೂಪಾಯಿಗಳನ್ನು ಕೊಡುತ್ತೇವೆಂದು

ಹೇಳಿದ್ದಾರೆ, ಇವತ್ತು ಯಾವುದಾದರೂ ಒಂದು ಅಪಘಾತದಲ್ಲಿ ಸತ್ತರೆ ಕನಿಷ್ಟ 1 ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ, ಆದುದರಿಂದ ಸತ್ತ ಆ ಮಹಿಳೆಗೆ ಇವತ್ತು 1 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ಚಿಂತಾಮಣಿ ತಾಲ್ಲೂಕಿನಲ್ಲಿ 6 ತಿಂಗಳ ಹಿಂದೆ ಬುರುಡಗುಂಟೆ ಗ್ರಾಮದಲ್ಲಿ ಇದೇ ರೀತಿಯಾಗಿದೆ, ಅದಾದ ಮೇಲೂ ಕೂಡ ಏನೂ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ, ಐ.ಪಿ. ಸೆಟ್‌ಗಳೆಲ್ಲ ಸುಟ್ಟುಹೋಗಿದೆ. ಇವತ್ತು ನಾವು ವಿದ್ಯುತ್ ಬಳಕೆಯನ್ನು ಜಾಸ್ತಿ ಮಾಡುತ್ತಿದ್ದೇವೆ, ಲೈನ್‌ಗಳನ್ನು ಸುರಕ್ಷಿತವಾಗಿ ಹಾಕದೆ ಹೋದರೆ ಅದರಿಂದ ಪ್ರಾಣಹಾನಿ ಹಾಗೂ ನಷ್ಟ ಎಷ್ಟಾಗುತ್ತದೆಂಬುದನ್ನು ಗಮನಿಸಬೇಕಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಯವರು ಸಮಂಜಸವಾದ ಉತ್ತರವನ್ನು ಕೊಟ್ಟು ಸೂಕ್ತ ಪರಿಹಾರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್ (ಇಂಧನ ರಾಜ್ಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಈ ಘಟನೆ ನಡೆದಿರುವುದು ನಿಜ, ಶ್ರೀಮತಿ ಎಲ್ಲಮ್ಮ ಎಂಬ ಮಹಿಳೆ ತೀರಿಕೊಂಡಿದ್ದಾಳೆ, ಅವರಿಗೆ ಈಗಾಗಲೇ 20 ಸಾವಿರ ರೂಪಾಯಿಗಳ ಪರಿಹಾರದ ಚೆಕನ್ನು ಕಳುಹಿಸಿಕೊಡಲಾಗಿದೆ. ಅಸಿಸ್ಟೆಂಟ್ ಕಮೀಷನರ್‌ರವರಿಂದ ಇನ್ನೂ ವರದಿ ಬಂದಿಲ್ಲ, ಆ ವರದಿ ಬಂದಮೇಲೆ ಸರ್ಕಾರ ಸೂಕ್ತವಾಗಿ ವಿಚಾರ ಮಾಡುತ್ತದೆ.

ಶ್ರೀ ಚೌಡರೆಡ್ಡಿ : ಎಲ್ಲಾದರೂ ಅಪಘಾತವಾದರೆ 1 ಲಕ್ಷ ರೂಪಾಯಿಗಳ ಪರಿಹಾರವನ್ನು ಕೊಡುತ್ತಾರೆ, 45 ವಯಸ್ಸಿನ ಕಡುಬಡತನದ ಆ ಮಹಿಳೆ ಸತ್ತಿರುವಾಗ 50 ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡುತ್ತೇನೆಂದರೆ ಇದರಲ್ಲಿ ಏನಾದರೂ ಅರ್ಥವಿದೆಯೇ? ದಯವಿಟ್ಟು ಈ ಬಗ್ಗೆ ಆಲೋಚನೆಯನ್ನು ಮಾಡಿ. ಆ ಘಟನೆ 9ನೇ ತಾರೀಖಿನಂದು ನಡೆದಿದೆ. ಎ.ಸಿ.ಯವರು 10ನೇ ತಾರೀಖಿನ ದಿವಸ ಅಲ್ಲಿಗೆ ಹೋಗಿದಾರೆ, ಅಲ್ಲಿ ಎಷ್ಟು ನಷ್ಟವಾಗಿದೆ ಎಂಬುದು ಸರ್ಕಾರಕ್ಕೆ ಗೊತ್ತಾಗದೇ ಹೋದರೆ ಹೇಗೆ? ಸಾಮಾನ್ಯವಾಗಿ ಹೈಟೆನ್‌ಷನ್ ವೈರ್ ಕೆಳಗೆ ಬಿದ್ದಮೇಲೆ ವಿದ್ಯುತ್ ಸಂಪರ್ಕ ಕಡಿದು ಹೋಗಬೇಕು, ಆ ರೀತಿಯಾಗಿಲ್ಲ. 2-3 ಸಲ ವಿದ್ಯುತ್ ಬಂತು, ಅದು ಏಕೆ ಹಾಗಾಯಿತು? ಈ ಬಗ್ಗೆ ತನಿಖೆಯಾಗಬೇಕು, ಇವತ್ತು ಚಿಂತಾಮಣಿಯಲ್ಲಿ ಆದಂತೆ ಎಲ್ಲಾ ಕಡೆಯೂ ಆಗುತ್ತಿದೆ. ಈ ವಿಚಾರದಲ್ಲಿ ಯಾರೂ ಕೂಡ ಬೇಜವಾಬ್ದಾರಿಯಿಂದ ನಡೆದುಕೊಳ್ಳಬಾರದೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೀರಕುಮಾರ್ ಎ. ಪಾಟೀಲ್ : ಆ ಹೈಟೆನ್‌ಷನ್ ವೈರ್ 1965ರಲ್ಲಿ ಹಾಕಿದ್ದಾರೆ, ಆ ಕಂಡಕ್ಟರನ್ನು ಈ ತಿಂಗಳ ಡಿಸೆಂಬರ್ ಒಳಗಡೆ ಬದಲಾವಣೆ ಮಾಡಿ ಸರಿಪಡಿಸುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ, ಅದನ್ನು ನಾಳೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು : ಉತ್ತರ ಬಂದಿರುವುದನ್ನು ಈಗ ತೆಗೆದುಕೊಳ್ಳುತ್ತೇವೆ, ನಾಳೆಯೇ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಬರುವುದಿಲ್ಲ, ಅಧಿವೇಶನ ಮುಗಿಯುವುದರೊಳಗಾಗಿ ತೆಗೆದುಕೊಳ್ಳುತ್ತೇವೆ. ಮಾನ್ಯ ಸುಬ್ಬಾರೆಡ್ಡಿಯವರೆ, ತಾವು ಮಾತನಾಡಿ.